ಹೊಳೆನರಸೀಪುರದ ಅಪರ ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ.

ಸಿ.ಸಿ. ನಂಃ **428/2019**

| | | | |
|---|---|---|---|
| ಸಾಕ್ಷಿಯ ಹೆಸರು | ಃ ಮಂಜೇಗೌಡ | ಸಿ.ಡಬ್ಲ್ಯೂ | ಃ 01 |
| ತಂದೆ ಹೆಸರು | ಃ ಅಣ್ಣೇ ಗೌಡ | ಪಿ.ಡಬ್ಲ್ಯೂ | ಃ 01 |
| ವಯಸ್ಸು | ಃ 55 ವರ್ಷ | ಪ್ರಮಾಣೀಕರಿಸಿದ ದಿಃ | 17.07.2026 |
| ವೃತ್ತಿ | ಃ ಕೃಷಿ | | |
| ವಾಸ | ಃ ಚಿಕ್ಕಬ್ಯಾಗತವಳ್ಳಿ ಗ್ರಾಮ | | |

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಎ.ಪಿ.ಪಿ.ಯವರಿಂದಃ

ನನಗೆ ಈ ಪ್ರಕರಣದ ಬಗ್ಗೆ ಏನು ತಿಳಿದಿಲ್ಲ. ಆರೋಪಿಗಳು ನಮ್ಮೂರಿನವರು. ನಾನು ಯಾವುದೇ ಗಲಾಟೆಗೆ ಸಂಬಂಧಿಸಿದಂತೆ ಯಾವುದೇ ಹೇಳಿಕೆ, ಮರುಹೇಳಿಕೆ ಮತ್ತು ದೂರನ್ನು ಪೊಲೀಸರಲ್ಲಿ ದಾಖಲಿಸಿಲ್ಲ. ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿ ಅವರು ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಅದನ್ನು ನಿ ಪಿ 1 ಎಂದು ಸಹಿಯನ್ನು 1 (ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಸದರಿ ಸಹಿಯನ್ನು ಪೊಲೀಸರ ಹೇಳಿಕೆ ಮೇರೆಗೆ ಠಾಣೆಯಲ್ಲಿ ಹಾಕಿರುತ್ತೇನೆ ಎನ್ನುತ್ತಾರೆ.

(ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ. ದೂರನ್ನು ಪರಿಶಿಲೀಸಿ ಪಾಟಿ ಸವಾಲಿಗೆ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ - ಮಾನ್ಯ ಎ.ಪಿ.ಪಿ. ರವರಿಂದಃ

ದಿನಾಂಕ 21.01.2019 ರಂದು ಮಧ್ಯಾಹ್ನ 3.00 ಕ್ಕೆ ಚಿಕ್ಕಬ್ಯಾಗತವಳ್ಳಿ ಯಲ್ಲಿ ಆರೋಪಿಗಳು ಚಾ ಸಾ 6 ರವರೊಂದಿಗೆ ಸಣ್ಣಪುಟ್ಟ ಗಲಾಟೆ ಮಾಡುತ್ತಿದ್ದರ ಬಗ್ಗೆ ಸಂಜೆ ಸುಮಾರು 7- 7.15 ಕ್ಕೆ ಚಾ ಸಾ 3 ಮತ್ತು 4 ರವರು ಒಂದನೇ ಆರೋಪಿಯ ಮನೆ ಬಳಿ ಸರ್ಕಾರಿ ಶಾಲೆ ಬಳಿ ಮಣ್ಣಿನ ರಸ್ತೆಯಲಿಲಒಂದನೇ ಆರೋಪಿಯ ತಂದೆ ತಾಯಿಯನ್ನು ಕುರಿತು ಅವರ ಮಗ ಮತ್ತು ಇತರರು ಸೇರಿ ಗಲಾಟೆ ಮಾಡಿದ ಬಗ್ಗೆ ಕೇಳುತ್ತಿದ್ದಾಗ ನಾನು ಸ್ಥಳಕ್ಕೆ ಹೋಗಿ ಅಷ್ಟು ಹೊತ್ತಿನಲ್ಲಿ ಏನು ಮಾತನಾಡುತ್ತಿದ್ದೀರಿ ಬೆಳಿಗ್ಗೆ ಕೇಳಿದರೆ ಆಯಿತು ಎಂದು ಚಾ ಸಾ 3 ಮತ್ತು 4 ರವರನ್ನು ಕರೆಯುತ್ತಿದ್ದಾಗ ಅಲ್ಲಿಯೇ ಇದ್ದ 1, 2, 3, 5 ನೇ ಆರೋಪಿಗಳು ಚಾ ಸಾ 1 ರವರ ಮೇಲಿನ ಹಳೆಯ ದ್ವೇಷದಿಂದ ಗಲಾಟೆ ಮಾಡಿ ಎಲ್ಲರನ್ನು ಸೇರಿಸಿ ಬೋಳಿ ಮಕ್ಕಳಾ, ಸೂಳೆ ಮಕ್ಕಳಾ ಎಂದು ಅವ್ಯಾಚ್ಚ ಶಬ್ದಗಳಿಂದ ಬೈದು ಮೂರನೇ ಆರೋಪಿಯ ಅಲ್ಲಿಯೇ ಬಿದ್ದಿದ್ದ ಕಲ್ಲಿನಿಂದ ನನಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯ ಮಾಡಿ ಬಿಡಿಸಿಕೊಳಳಲು ಬಂದ ಚಾ ಸಾ 2 ರವರಿಗೆ ಒಂದನೇ ಆರೋಪಿ ಕಲ್ಲಿನಿಂದ

ಬಲಗಾಲಿಗೆ ಹೊಡದು ಸಾಮಾನ್ಯ ಸ್ವರೂಪದ ಗಾಯ ಮಾಡಿ ನಂತರ ನಾಲ್ಕು ಜನ ಆರೋಪಿತರು ನನಗೆ ನನ್ನ ಮಕ್ಕಳಾ ಇನ್ನೊಂದು ಬಾರಿ ಅವರನ್ನು ಕೇಳಲು ಹೋದರೆ ನಮ್ಮನ್ನು ಕೊಲೆ ಮಾಡುತ್ತೆವೆ ಎಂದು ಕೊಲೆ ಬೆದರಿಕೆ ಹಾಕಿದರು ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ದಿನಾಂಕ 28.01.2019 ರಂದು ನಾನು ಪೊಲೀಸರಲ್ಲಿ ಹೇಳಿಕೆ ಹೇಳಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಯ ಕಲಂ 161 ರ ಹೇಳಿಕೆಯನ್ನು ನಿ ಪಿ 2 ಎಂದು ಗುರುತಿಸಲಾಯಿತು.

2. ಆರೋಪಿಗಳು ನನಗೆ ಪರಿಚಯಸ್ಥರಾದರಿಂದ ಅವರೊಂದಿಗೆ ರಾಜೀ ಮಾಡಿಕೊಂಡ ಕಾರಣ ಅವರಿಗೆ ಸಹಾಯ ಮಾಡಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ಪರ ಪಾಟಿ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲಃ

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇ.**

1ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ,

ಹೊಳೆನರಸೀಪುರ